ಈ) ಪ್ರಸ್ತುತ 2014–15ನೇ ಸಾಲಿಗೆ ಒದಗಿಸಿದ ಯೋಜನಾವಾರು ಅನುದಾನದ ವಿವರ ಕೆಳಕಂಡಂತಿದೆ.

ಕ್ರಸಂ	ಯೋಜನೆ/ಲೆಕ್ಕ ಶೀರ್ಷಿಕೆ	ಒದಗಿಸಿದ ಅನುದಾನ (ರೂ.ಕೋಟಿಗಳಲ್ಲಿ)
1	ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಲೆಶೀ—3054	153.55
2	ಯೋಜನೇತರ ಲೆಶೀ–3054–ಜಿ.ಪಂ. ಕಾರ್ಯಕ್ರಮ–ನಿರ್ವಹಣೆ (ಟಾಸ್ಕ್‌ಫೋರ್ಸ್)	135.00
3	13ನೇ ಹಣಕಾಸು ಆಯೋಗ ಯೋಜನೆ–ರಸ್ತೆ ನಿರ್ವಹಣೆ	134.70
4	ನಬಾರ್ಡ್ ಯೋಜನೆ	133.16
5	ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ	350.00
6	ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–2	870.84

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದುರಸ್ತಿ

1331(852); ಶ್ರಿ ಬಣಕಾರ್ ಯು.ಬಿ

ಅ) ಹಿರೇಕೆರೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ದುರಸ್ತಿಯ ಬಗ್ಗೆ ಈ ಹಿಂದಿನ ಅಧಿವೇಶನದಲ್ಲಿ ನೀಡಿದ ಉತ್ತರದ ಮೇಲೆ ಸರ್ಕಾರ ಕೈಗೊಂಡ ಇತ್ತೀಚಿನ ಕ್ರಮಗಳೇನು;

ಆ) ಹಿರೇಕೆರೂರು ಶಾಸಕರು ಮಾನ್ಯ ಶಿಕ್ಷಣ ಸಚಿವರಿಗೆ ದಿನಾಂಕ 13.08.2014ರಂದು ಬರೆದ ಪತ್ರದ ಸಾರಾಂಶ ಮತ್ತು ಅದರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಕಾಲೇಜು ಶಿಕ್ಷಣ ನಿರ್ದೇಶಕರು ಹಾಗೂ ಹಾವೇರಿ ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಅಭಿಯಂತರರ ನಡುವೆ ಸದರಿ ಕಟ್ಟಡದ ಕುರಿತು ನಡೆದ ಪತ್ರ ವ್ಯವಹಾರದ ಸಾರಾಂಶ ಮತ್ತು ಸರ್ಕಾರದ ಅಭಿಪ್ರಾಯ ವಿವರಿಸುವುದು;

ಈ) ಕಟ್ಟಡದ ದುರಸ್ತಿಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು;

ಉ) ಒಂದು ವೇಳೆ ದುರಸ್ತಿ ವಿಳಂಬ ಆಗಿ ಸದರಿ ಕಟ್ಟಡದಲ್ಲಿ ಅನಾಹುತ ಸಂಭವಿಸಿದರೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಲೋಕೋಪಯೋಗಿ ಇಲಾಖೆಯಿಂದ ಕಟ್ಟಡದ ಮೌಲ್ಯಮಾಪನ ಮಾಡಿಸಿ ದುರಸ್ತಿ ಬಗ್ಗೆ ಕಾರ್ಯನಿರ್ವಹಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ಹಾವೇರಿ, ರವರಿಂದ ವರದಿ ಸ್ವೀಕೃತವಾಗಿದ್ದು, ಸದರಿ ವರದಿಯ ಪ್ರಕಾರ ಮೌಲ್ಯಮಾಪನ ಮತ್ತು ದುರಸ್ತಿ ಅಂದಾಜು ಮೊತ್ತದ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) ಪರಿಶೀಲಿಸಲಾಗುತ್ತಿದೆ.

ಇ) ಕಾರ್ಯನಿರ್ವಾಹಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ಹಾವೇರಿರವರಿಂದ ಇಲಾಖೆಯಲ್ಲಿ ಮೌಲ್ಯಮಾಪನ ವರದಿ ಸ್ವೀಕೃತವಾಗಿದ್ದು, ಸದರಿ ವರದಿಯ ಪ್ರಕಾರ ಮೌಲ್ಯಮಾಪನ ಮೊತ್ತ ರೂ.6.00 ಲಕ್ಷ ಶುಲ್ಕ ಭರಿಸಲು ಹಾಗೂ ಅಂದಾಜು ಮೊತ್ತದ ಶೇಕಡ 50ರಷ್ಟು ಪಾವತಿಸಿದ್ದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದಾಗಿ ತಿಳಿಸಿರುತ್ತಾರೆ. ಅದರಂತೆ ಪ್ರಸ್ತಾವನೆಯನ್ನು ಕಾಲೇಜು ಶಿಕ್ಷಣ ಆಯುಕ್ತರಿಂದ ನಿರೀಕ್ಷಿಸಲಾಗಿದ್ದು, ಪರಿಶೀಲಿಸಿ ಕ್ರಮವಹಿಸಲಾಗುವುದು.

ಈ) ಮೇಲಿನಂತೆ

ಊ) ಕಟ್ಟಡ ಅಸುರಕ್ಷಿತವೆಂದು ಕಂಡುಬಂದಲ್ಲಿ ವಿದ್ಯಾರ್ಥಿಗಳ ಸುರಕ್ಷತೆ ಹಿತದೃಷ್ಟಿಯಿಂದ ಪರ್ಯಾಯ ವ್ಯವಸ್ಥೆ ಕಲ್ಪಿಸಿಕೊಳ್ಳುವಂತೆ ಪ್ರಾಂಶುಪಾಲರಿಗೆ ನಿರ್ದೇಶನ ನೀಡಲಾಗಿರುತ್ತದೆ. ಅನಾಹುತ ಸಂಭವಿಸಿದ್ದಲ್ಲಿ ಕಟ್ಟಡ ಕಾಮಗಾರಿ ಕೈಗೊಳ್ಳಲಾದ ಸಂಸ್ಥೆ ಸಂಪೂರ್ಣ ಹೊಣೆಗಾರರಾಗಿರುತ್ತಾರೆ.

ಹೊಸ ಸರ್ಕಾರಿ ಪ್ರೌಢ ಶಾಲಾ ಹಾಗೂ ಕಾಲೇಜುಗಳು

1332(854); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) 2013–14 ಹಾಗೂ 2014–15ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಿಸಿದ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು; ಅವು ಯಾವುವು (ತಾಲ್ಲೂಕುವಾರು ವಿವರ ನೀಡುವುದು)

ಆ) ಹಿರೇಕೆರೂರು ತಾಲ್ಲೂಕಿನಲ್ಲಿ ಹಿರೇಮಾರವ, ಹಿರೇಬೀದಿಹಾಳ, ಕಮಲಾಪುರ ಮಾನೂರು ಗ್ರಾಮಗಳಿಗೆ ಸರ್ಕಾರಿ ಪ್ರೌಢಶಾಲೆಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಹೊಸ ಸರ್ಕಾರಿ ಪ್ರೌಢಶಾಲೆ ಪ್ರಾರಂಭಿಸಲು ಸರ್ಕಾರದ ವತಿಯಿಂದ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ರಾಜ್ಯದಲ್ಲಿ ಒಟ್ಟು 94 ಸರ್ಕಾರಿ ಪ್ರೌಢಶಾಲೆಗಳನ್ನು ಹೊಸದಾಗಿ ಪ್ರಾರಂಭಿಸಲಾಗಿದೆ.